ನಾನು ಆಸಕ್ತಿಯಿಂದ ಮುಂದೆ ಬಾಗಿ ಕೂತೆ.

ಆಕೆ ಕತೆಯನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸಿದಳು.

'ನಮ್ಮ ತಾತ ಬಾರ್ಬರೇ ಆದರೂ ಮೇಳದಲ್ಲಿ ಭಜಂತ್ರಿಯನ್ನೂ ಊದುತ್ತಿದ್ದ. ಆದರೆ ಅಂಥ ಪರಿಪೂರ್ಣ ಕೆಲಸಗಾರನೇನಲ್ಲ. ಸುಮ್ಮನೆ ಸಂಖ್ಯೆಗಾಗಿ ಆತನನ್ನೂ ಸೇರಿಸಿಕೊಂಡರೆ ನಾಲ್ವರೊಂದಿಗೆ ಸೇರಿ ಬಂದೂ ಬಾರದಂಥ ಸ್ವರ ಹೊರಡಿಸುವವನಂತೆ. ಅಪಸ್ವರದಿಂದ ಎಲ್ಲರನ್ನೂ ನಗಿಸುತ್ತಿದ್ದನಂತೆ. ನಮ್ಮ ಅಪ್ಪನಿಗೆ ಆ ಅಪಸ್ವರವೇ ಇಷ್ಟವಾಯಿತು. ನಮ್ಮ ತಾತನ ಹತ್ತಿರ ಕ್ಷೌರಿಕ ಕೆಲಸ ಕಲಿಯಲು ಹಿಂದೇಟು ಹಾಕಿದ ನಮ್ಮಪ್ಪ ಅದೇ ತಾತನ ಹತ್ತಿರ ಬಲವಂತ ಮಾಡಿ ನಾದಸ್ವರ ಊದುವುದನ್ನು ಕಲಿತುಕೊಂಡ.

